# ಕರ್ನಾಟಕ ಸರ್ಕಾರದ ನಡವಳಿಗಳು

2 NOV 2015
C-13848

ವಿಷಯ:- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಪ್ರಮುಖವಾದ ಕೃಷಿಗೆ ಯೋಗ್ಯವಾದ ಮೀನು ತಳಿಗಳಿಂದ ಉತ್ತಮ ಮೀನುಮರಿ ಉತ್ಪಾದನೆ ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/15/ಆರ್‌ಕೆವಿವೈ/2015, ದಿನಾಂಕ: 24-08-2015 ಮತ್ತು 21-09-2015.

31/10/15

******

## ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, 2015-16ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.10.00 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು, ಈ ಮೊತ್ತಕ್ಕೆ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ದಿನಾಂಕ: 02-07-2015 ರಂದು ನಡೆದ 13ನೇ ರಾಜ್ಯ ಮಟ್ಟದ ಅನುಮೋದನಾ ಸಮಿತಿ ಸಭೆಯಲ್ಲಿ ರೂ.10.00 ಕೋಟಿ ಕಾರ್ಯಕ್ರಮಗಳಿಗೆ ಮಂಜೂರಾತಿ ದೊರಕಿದೆ. ಇದರಲ್ಲಿ, "ಪ್ರಮುಖವಾದ ಕೃಷಿಗೆ ಯೋಗ್ಯವಾದ ಮೀನು ತಳಿಗಳಿಂದ ಉತ್ತಮ ಮೀನುಮರಿ ಉತ್ಪಾದನೆ" ಎಂಬ ಯೋಜನೆಯನ್ನು ರೂ.1.00 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದ್ದು, 2015-16ನೇ ಸಾಲಿಗೆ ರೂ.0.25 ಕೋಟಿ ಅನುದಾನ ಒದಗಿಸಲು ಮಂಜೂರಾತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

ಈ ಯೋಜನೆಯನ್ನು ಕೆ.ವಿ.ಎಫ್.ಎಸ್.ಯು., ಬೀದರ್, ಸಿಹಿನೀರು ಜಲಕೃಷಿಯ ಕೇಂದ್ರ ಸಂಸ್ಥೆ, ಬೆಂಗಳೂರು ಸಹಯೋಗದಿಂದ ಇಲಾಖೆಯ ಅಧಿಕಾರಿಗಳ ಮೂಲಕ ಅನುಷ್ಠಾನ ಗೊಳಿಸಲಾಗುವುದು. ಯೋಜನೆಯ ಒಟ್ಟು ವೆಚ್ಚ ರೂ.100.00 ಲಕ್ಷಗಳಾಗಿದ್ದು, 2015-16ನೇ ಸಾಲಿಗೆ ರೂ.25.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ ಎಂದು ಹಾಗೂ ಈ ಯೋಜನೆಯನ್ನು 3 ವರ್ಷಗಳ ಕಾಲಾವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸುತ್ತಾ, ಸದರಿ ಯೋಜನೆಯನ್ನು ರೂ.100.00 ಲಕ್ಷ ವೆಚ್ಚದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೈಗೊಳ್ಳಲು ಹಾಗೂ ಪ್ರಸಕ್ತ ಸಾಲಿನಲ್ಲಿ ರೂ.25.00 ಲಕ್ಷ ವೆಚ್ಚ ಮಾಡಿ ಈ ಕಾರ್ಯಕ್ರಮವನ್ನು ಯೋಜನಾ ವರದಿಯಂತೆ ಬಿಡುಗಡೆಗೊಳಿಸಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

-2-

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 182 ಮೀಇಯೋ 2015, ಬೆಂಗಳೂರು ದಿನಾಂಕ: 29-10-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ "ಪ್ರಮುಖವಾದ ಕೃಷಿಗೆ ಯೋಗ್ಯವಾದ ಮೀನು ತಳಿಗಳಿಂದ ಉತ್ತಮ ಮೀನುಮರಿ ಉತ್ಪಾದನೆ" ಎಂಬ ಯೋಜನೆಯನ್ನು ರೂ.100.00 ಲಕ್ಷ (ಒಂದುನೂರು ಲಕ್ಷ ರೂಪಾಯಿಗಳು ಮಾತ್ರ)ಗಳ ವೆಚ್ಚದಲ್ಲಿ ಕೈಗೊಳ್ಳಲು ಹಾಗೂ ಪ್ರಸಕ್ತ ಸಾಲಿನಲ್ಲಿ ರೂ.25.00 ಲಕ್ಷ ವೆಚ್ಚ ಮಾಡಿ ಕಾರ್ಯಕ್ರಮಗಳನ್ನು ಯೋಜನಾ ವರದಿಯಂತೆ ಕೆಳಕಂಡಂತೆ ಬಿಡುಗಡೆಗೊಳಿಸಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | 2015-16 | 2016-17 | 2017-18 | ಒಟ್ಟು |
|---|---|---|---|---|---|
| 1) | ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ | 9.00 | 12.00 | 11.00 | 32.00 |
| 2) | ಸಿಹಿನೀರು ಜಲಕೃಷಿಯ ಕೇಂದ್ರೀಯ ಸಂಸ್ಥೆ, ಬೆಂಗಳೂರು | 12.00 | 26.00 | 14.00 | 52.00 |
| 3) | ಮೀನುಗಾರಿಕೆ ಇಲಾಖೆ | 4.00 | 6.00 | 6.00 | 16.00 |
| | ಒಟ್ಟು | 25.00 | 44.00 | 31.00 | 100.00 |

ಈ ಆದೇಶವನ್ನು ದಿ: 02-07-2015 ರಂದು ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಅನುಮೋದನಾ ಸಮಿತಿಯ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/10/15

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

29/10.

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

-3-

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಕುಲಸಚಿವರು, ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್.
5) ಸಿಹಿನೀರು ಜಲಕೃಷಿಯ ಕೇಂದ್ರೀಯ ಸಂಸ್ಥೆ, ಬೆಂಗಳೂರು.
6) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
7) ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
8) ಸರ್ಕಾರದ ಉಪ ಕಾರ್ಯದರ್ಶಿ ಹಾಗು ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
10) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
11) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.